ನನ್ನ ಓದು

# ಹರಿವ ನದಿಯ ಒಡಲೊಳಗೆ ಉರಿವ ಬೆಂಕಿ!

**ಗೌರಿ**

ಉತ್ತರ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಬೆಳೆದು, ಮುಂಬೈನಲ್ಲಿ ನ್ಯಾಯವಾದಿ ಆಗಿರುವ ಅಮಿತಾ ಭಾಗವತ್ ಅವರ ಮೊದಲ ಕಾದಂಬರಿ 'ನೀಲಿ ನಕ್ಷೆ'. ಈ ಕಾದಂಬರಿಯೂ ಲೇಖಕಿಯ ಬದುಕಿನ ಹಾಗೆ ಉತ್ತರ ಕನ್ನಡದ ಕಿರುಪಟ್ಟಣದಲ್ಲಿ ಹುಟ್ಟಿ, ಮುಂಬೈ ಸೇರಿ ಅಲ್ಲಿ ಹರಡಿಕೊಳ್ಳುವ ಸರಯೂ ಎಂಬ ಹುಡುಗಿಯ ಬದುಕಿನ ಕಥನವನ್ನು ಒಳಗೊಂಡಿದೆ.

'ನೀಲಿ ನಕ್ಷೆ' ಸರಾಗ ಓದು ಮತ್ತು ಗಾಢವಾದ ಅನುಭವದಿಂದ ಗಮನಸೆಳೆಯುವ ಕಾದಂಬರಿ. ಇದು ನಿಂತಲ್ಲಿಯೇ ಬೇರೂರಿದ ಕಥನ ಪ್ರಪಂಚವಲ್ಲ; ನದಿಯ ಹಾಗೆ ಹರಿಯುತ್ತಾ ನೆಲವನ್ನು ಅಪ್ಪಿಕೊಂಡು ಸಾಗುತ್ತಲೇ ಆಕಾಶದ ಜೊತೆಗೂ ಸಂವಾದ ನಡೆಸಲು ಹೊರಟಿರುವಂಥ ಹುಡುಗಿಯ ಅನುಭವ ಪ್ರಪಂಚ. ಇತ್ತ ಎಲ್ಲಿಯೂ ಆಳವಾಗಿ ಬೇರೂರಲೂ ಸಾಧ್ಯವಾಗದೆ, ಅತ್ತ ಆಕಾಶವನ್ನು ಮುಟ್ಟಿ ನಕ್ಷತ್ರದ ಹಾಗೆ ಮಿಂಚುತ್ತ ಮೈಮರೆಯಲೂ ಸಾಧ್ಯವಾಗದ ಅಸಹಾಯಕ ಹುಡುಗಿಯ ಅನುಭವಪ್ರಪಂಚ. ಈ ಕೃತಿ ಸರಯೂಳ ಅನುಭವ ಪ್ರಪಂಚವನ್ನು ತೋರಿಸುತ್ತಲೇ, ಸರಯೂಳಂಥ ಉಜ್ವಲ ವ್ಯಕ್ತಿತ್ವದ ಹುಡುಗಿಯನ್ನು ಈ ಪ್ರಪಂಚ, ಸಮಾಜ, ವ್ಯವಸ್ಥೆ, ಅವುಗಳಿಂದ ನಿರ್ದೇಶಿಸಲಾದ ಮನಃಸ್ಥಿತಿಗಳು ಹೇಗೆಲ್ಲ ಹರಸಾಹಸಪಟ್ಟು ಹತ್ತಿಕ್ಕಲು ಯತ್ನಿಸುತ್ತದೆ ಎನ್ನುವುದನ್ನೂ ತೋರಿಸುತ್ತ ಹೋಗುತ್ತವೆ.

ಕಾದಂಬರಿಯ ಆರಂಭದಲ್ಲಿ ಕಾರವಾರದ ಪರಿಸರ ಗಟ್ಟಿಯಾಗಿ, ಗಾಢವಾಗಿ ಹರಳುಗಟ್ಟಿದೆ. ಈ ವಾತಾವರಣವೇ ಒಂದು ಪಾತ್ರದ ಹಾಗೆ ಭಾಸವಾಗಿ ಕಾದಂಬರಿಯ ನಡೆಯನ್ನು ನಿರ್ದೇಶಿಸುತ್ತಿದೆ. ದಟ್ಟ ಕಾಡಿನ ನಡುವೆ ಮೈಮರೆತು ನಡೆದು ಹೋಗುವಂಥ ಅನುಭವಕೊಡುತ್ತದೆ. ಮುಗ್ಧಮನಸ್ಸಿನ, ತುಂಬಚಂದದ ಸರಯೂಳಿಗೆ ತನ್ನ ಚಂದವೇ ಶಾಪವಾಗುವ ದುರಂತವು ಕಾಡುವಂತಿದೆ. ಜಗತ್ತುಗಳು ಬದಲಾಗುತ್ತವೆಯೇ ಹೊರತು – ಅವಳನ್ನು ಕಾಡುವ ಸಮಸ್ಯೆಗಳು, ಸಮಾಜ ಅವಳನ್ನು ನೋಡುವ ರೀತಿ ಬದಲಾಗುವುದೇ ಇಲ್ಲ. ಬಾಲ್ಯದಲ್ಲಿ ತನ್ನದಲ್ಲದ ತಪ್ಪಿಗೆ ಅಪ್ಪನ ಪ್ರೀತಿಯಿಂದ ವಂಚಿತಳಾಗುವ ಸರಯೂ, ಬೆಳೆಯುತ್ತಲೂ ಬೇರೆ ಯಾರದೋ ತಪ್ಪಿಗೆ ಕೊರಳು ಕೊಡುವುದರಲ್ಲಿಯೇ ದಿಕ್ಕೆಡುತ್ತಾಳೆ. ಸೌಂದರ್ಯ ಅನ್ನುವುದು ಸಂಭ್ರಮ, ಹೆಮ್ಮೆಯ ಸಂಗತಿಯಾಗುವ ಬದಲಿಗೆ ಸಂಕೋಚ, ಸಂತಾಪ ದುರಂತಗಳ ಒಟ್ಟೂ ಮೊತ್ತವಾಗಿ ಸರಯೂಳ ಬದುಕಿನಲ್ಲಿ ಎರಗುತ್ತವೆ. ಕೊನೆಯವರೆಗೂ ಶಾಪಗ್ರಸ್ತ ದೇವತೆಯಂತೆಯೇ ಬದುಕನ್ನು ಸಾಗಿಸುವ ಸರಯೂಳ ಬದುಕಿನ ಕಥನ ಇಂದಿನ ಹಲವು ಹೆಣ್ಣುಮಕ್ಕಳ ಕಥೆಯೂ ಹೌದು. ಸಣ್ಣ ಪಟ್ಟಣಗಳಲ್ಲಿ ನಡೆಯುವ ಕ್ಷುಲ್ಲಕ ಘಟನೆಗಳು ಹೆಣ್ಣುಮಕ್ಕಳ ಜೀವನದ ಗತಿಯನ್ನೇ ಬದಲಿಸುವಷ್ಟು ಕ್ರೌರ್ಯವನ್ನು ಒಳಗೊಂಡಿರುತ್ತವೆ. ಹಾಗೆ ಬದುಕಿನ ಪರಿಸ್ಥಿತಿಗಳು ಫುಟ್‌ಬಾಲ್‌ನಂತೆ ಒದೆಯುತ್ತಲೇ ಸರಯೂಳ ಬದುಕಿನ ಚಿತ್ರವನ್ನು ಚೆಲ್ಲಾಪಿಲ್ಲಿ ಮಾಡಿಬಿಡುತ್ತವೆ. ಯಾರೋ ಬರೆದ ಪ್ರೇಮಪತ್ರವೊಂದು ದುಃಸ್ವಪ್ನವಾಗಿ ಕಾಡುವುದರಿಂದ ಹಿಡಿದು, ವಿಶಾಲ್ ಜೊತೆಗಿನ ಪ್ರೇಮವು ಜಾತಿಯ, ಅಂತಸ್ತಿನ ಕಾರಣಕ್ಕೆ ಮುರಿದುಬೀಳುವವರೆಗೆ, ಸ್ನೇಹಿಲ್ ಸಾವಿನ ನೆನಪು ಅಂಕಿತ್, ಸರಯೂಳಿಂದ ದೂರ ಆಗುವಂತೆ ಮಾಡುವವರೆಗೆ ಅವಳದಲ್ಲದ ತಪ್ಪಿಗೆ ಅವಳು ಶಿಕ್ಷೆ ಅನುಭವಿಸುತ್ತಲೇ ಬರುತ್ತಾಳೆ. ಆದರೆ ಯಾವ ಹಂತದಲ್ಲಿಯೂ ಕುಗ್ಗದೆ, ಬಂಡೆಯ ಮೇಲೂ ಬೇರೂರಿಕೊಂಡು ಹಸಿರಾಗಿ ಹಬ್ಬಬಲ್ಲ ಅವಳ